RNU AIR DHARWAD

SEPTEMBER 12, 2025

**AKASHAVANI - DHARWAD**

**PRADESH SAMACHARA (KANNADA) 12 PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

ದೇಶದ 15 ನೇ ಉಪ ರಾಷ್ಟ್ರಪತಿಯಾಗಿ, ಸಿ.ಪಿ ರಾಧಾಕೃಷ್ಣನ್ ಅವರು ಇಂದು ರಾಷ್ಟ್ರಪತಿ ಭವನದ, ಗಣತಂತ್ರ ಮಂಟಪದಲ್ಲಿ ಆಯೋಜಿತ ಸಮಾರಂಭದಲ್ಲಿ ಪ್ರಮಾಣ ವಚನ ಸ್ವೀಕರಿಸಿ, ಅಧಿಕಾರ ವಹಿಸಿಕೊಂಡರು. ಗೌರವಾನ್ವಿತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಮಾಣ ವಚನ ಬೋಧಿಸಿದರು. ಸಮಾರಂಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ, ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್, ಲೋಕಸಭಾಧ್ಯಕ್ಷ ಓಂ ಬಿರ್ಲಾ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

<><><>

ಪ್ರಮಾಣ ವಚನ ಸ್ವೀಕಾರದ ಬಳಿಕ, ರಾಜಘಾಟ್ ಗೆ ತಲುಪಿದ ಉಪ ರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್ ಅವರು, ಮಹಾತ್ಮಾ ಗಾಂಧಿ ಸಮಾಧಿಗೆ ಪುಷ್ಪನಮನ ಸಲ್ಲಿಸಿ, ಗೌರವ ಸಮರ್ಪಿಸಿದರು.

<><><>

ಭಾರತ, 250 ಗಿಗಾ ವ್ಯಾಟ್ ಪಳೆಯುಳಿಕೆ'ಯೇತರ ಇಂಧನ ಆಧರಿಸಿ, ವಿದ್ಯುತ್ ಉತ್ಪಾದಿಸಿ, ವಿಶ್ವದ ಗಮನ ಸೆಳೆದಿದೆ ಎಂದು, ಕೇಂದ್ರ ನವೀನ ಹಾಗೂ ನವೀಕರಿಸಬಹುದಾದ, ಇಂಧನ ಖಾತೆ ಸಚಿವ ಪ್ರಲ್ಹಾದ ಜೋಶಿ, ತಿಳಿಸಿದ್ದಾರೆ. ಹೊಸ ದಿಲ್ಲಿಯಲ್ಲಿ ಆಯೋಜಿಸಿದ್ದ, ನವೀಕರಿಸಬಹುದಾದ ಇಂಧನ ಕುರಿತ, ಪರಿಶೀಲನಾ ಅಧಿವೇಶನದಲ್ಲಿ ಅವರು, ಮಾತನಾಡಿದರು. 2030ರ ವೇಳೆಗೆ, 500 ಗಿಗಾ ವ್ಯಾಟ್‌ನಷ್ಟು, ನವೀಕರಿಸಬಹುದಾದ ಇಂಧನ ಉತ್ಪಾದನೆ ಗುರಿ ಹೊಂದಲಾಗಿದೆ. ಸ್ವಚ್ಛ ಭಾರತ್ ಮತ್ತು ಸ್ವಚ್ಛ ಇಂಧನ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಹತ್ವಕಾಂಕ್ಷಿ ಕಾರ್ಯಕ್ರಮವಾಗಿದೆ ಎಂದರು. ಜಿ.ಎಸ್.ಟಿ. ಪರಿಷ್ಕರಣೆ, ಜಿ.ಡಿ.ಪಿ. ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದರು.

<><><>

'ರಾಷ್ಟ್ರಕ್ಕಾಗಿ ಮಧ್ಯಸ್ಥಿಕೆ' ಧ್ಯೇಯದೊಂದಿಗೆ, ನಾಳೆ, 13 ರಂದು, 3ನೇ ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿತವಾಗಿದೆ. ಹೆಚ್ಚಿನ ಮಾಹಿತಿಗೆ, ನಾಲ್ಸಾ ಕಾನೂನು, ಉಚಿತ ಸಹಾಯವಾಣಿ, 1-5-1-0-0 ಗೆ ಕರೆ ಮಾಡಬಹುದು. ಜುಲೈ 1 ರಿಂದ ಈ ತಿಂಗಳ 30ರ ವರೆಗೆ, 90 ದಿನಗಳ, ವಿಚಾರಣಾ ಹಂತದ ಪ್ರಕರಣಗಳನ್ನು, ಕಕ್ಷಿದಾರರು ರಾಜೀ ಸಂಧಾನದ ಮೂಲಕ, ಬಗೆಹರಿಸಿಕೊಳ್ಳಲು, ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವಾ ಪ್ರಾಧಿಕಾರಗಳು, ಅವಕಾಶ ಕಲ್ಪಿಸಿವೆ.

<><><>

ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ, ನಾಳೆಯಿಂದ 16 ರವರೆಗೆ 'ಪೌಷ್ಠಿಕ ಆಹಾರ ಭದ್ರತೆಗೆ ಮಣ್ಣಿನ ಆರೋಗ್ಯ ಮತ್ತು ಸಾಂಪ್ರದಾಯಿಕ ತಳಿಗಳು' ಎಂಬ ಘೋಷವಾಕ್ಯದೊಂದಿಗೆ ಕೃಷಿ ಮೇಳ– 2025 ಆಯೋಜಿತವಾಗಿದೆ. ಈ ಬಾರಿ ಒಟ್ಟು 600 ಮಳಿಗೆಗಳ ಮೂಲಕ, ಕೃಷಿ ಮೇಳದ ವಸ್ತು ಪ್ರದರ್ಶನ ಜರುಗಲಿದೆ. ಕೃಷಿ ಮೇಳದ ವಿಶೇಷತೆಗಳ ಬಗ್ಗೆ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ವಿಶ್ವವಿದ್ಯಾಲಯದ ಉಪ ಕುಲಪತಿ ಡಾಕ್ಟರ ಪಿ.ಎಲ್ ಪಾಟೀಲ್ ...

<><><>

ಧ್ವನಿ: ಡಾಕ್ಟರ ಪಿ.ಎಲ್ ಪಾಟೀಲ್ 41 ಸೆಕೆಂದುಗಳು

<><><>

ಬೆಂಗಳೂರು ಜಲಮಂಡಳಿಯ ಏರಿಯೇಟರ್ ಅಳವಡಿಕೆ ನಿರ್ಧಾರದಿಂದ, ಪ್ರತಿದಿನ 90 ಎಂ.ಎಲ್.ಡಿ ನೀರು ಉಳಿತಾಯವಾಗುತ್ತಿದೆ, ನಗರವಾಸಿಗಳಾದ ಎಲ್ಲರೂ ನೀರಿನ ಅತಿಯಾದ ಬಳಕೆಗೆ ಕಡಿವಾಣ ಹಾಕಲು, ಏರಿಯೇಟರ್ ಅಳವಡಿಸಿಕೊಳ್ಳುವಂತೆ  ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಕೋರಿದ್ದಾರೆ. ಈ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಕಳೆದ 15 ತಿಂಗಳ ಅವಧಿಯಲ್ಲಿ, ನಗರಾದ್ಯಂತ ಒಟ್ಟು 14 ಲಕ್ಷ 33 ಸಾವಿರದ 316 ಏರಿಯೇಟರ್ ಅಳವಡಿಕೆಯಾಗಿವೆ ಎಂದು ತಿಳಿಸಿದ್ದಾರೆ.

<><><>

ಖ್ಯಾತ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತಗಾರ, ಮಲ್ಲಿಕಾರ್ಜುನ ಮನಸೂರ ಅವರ, 33ನೇ ಪುಣ್ಯತಿಥಿ ಹಿನ್ನೆಲೆ, ಇಂದು ಬೆಳಗ್ಗೆ, ಅವರ ಶಿಷ್ಯ ಬಳಗದಿಂದ, ಧಾರವಾಡದಲ್ಲಿರುವ ಅವರ ಸಮಾಧಿಗೆ ಗೌರವ ಅರ್ಪಿಸಲಾಯಿತು. ಇಂದು ಸಂಜೆ 5:30 ಕ್ಕೆ, ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ, ಬೆಂಗಳೂರಿನ ಶಡ್ಜ ಗೋಡ್ಖಿಂಡಿ, ಕೊಳಲು ವಾದನ, ದತ್ತಾತ್ರೇಯ ವೇಲಣಕರ ಹಿಂದೂಸ್ಥಾನಿ ಶಾಸ್ತ್ರೀಯ ಗಾಯನ ಪ್ರಸ್ತುತ ಪಡಿಸಲಿದ್ದಾರೆ ಎಂದು, ಟ್ರಸ್ಟ್ ಅಧ್ಯಕ್ಷ ಪಂಡಿತ ಎಂ. ವೆಂಕಟೇಶಕುಮಾರ ತಿಳಿಸಿದ್ದಾರೆ.

<><><>

ಡೆಂಘಿ ಮತ್ತು ಮಲೇರಿಯಾ, ತಡೆಗಟ್ಟುವಿಕೆ ಹಾಗೂ ನಿಯಂತ್ರಣಾ ಕ್ರಮಗಳನ್ನು ತೀವ್ರಗೊಳಿಸುವಂತೆ, ಮುಂಬರುವ ತಿಂಗಳಲ್ಲಿ, ತೀವ್ರ ನಿಗಾ ವಹಿಸುವಂತೆ, ರಾಜ್ಯಗಳ ಮುಖ್ಯಮಂತ್ರಿಗಳಿಗೆ, ಕೇಂದ್ರ ಆರೋಗ್ಯ ಖಾತೆ ಸಚಿವ, ಜೆ.ಪಿ.ನಡ್ಡಾ ಸೂಚಿಸಿದ್ದಾರೆ. ಹೊಸ ದಿಲ್ಲಿಯಲ್ಲಿ, ಪರಿಶೀಲನಾ ಸಭೆ ನಡೆಸಿದ ಅವರು, ಮುಂಬರುವ 20 ದಿನಗಳಲ್ಲಿ, ಡೆಂಘಿ ಹಾಗೂ ಮಲೇರಿಯಾ ಮುಕ್ತ ಅಭಿಯಾನದ, ಕಾರ್ಯ ಯೋಜನೆ ರೂಪಿಸಿ, ಖುದ್ದು ಉಸ್ತುವಾರಿ ವಹಿಸಿ, ಅನುಷ್ಠಾನ ಗೊಳಿಸುವಂತೆ, ರಾಜ್ಯಗಳ ಆರೋಗ್ಯ ಖಾತೆ ಸಚಿವರಿಗೆ, ಅವರು ಕೋರಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>